VIJAYVANI / HUBBALLI
विजयवाणी / हुब्बल्लि
20 MAR 2019

(1)

# ಇನ್ನೂ ಇಲ್ಲ ಚಾರ್ಜ್‌ಶೀಟ್!

## ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ಕಟ್ಟಡ ಪ್ರಕರಣ | 7 ಜನರ ಬಲಿ ಪಡೆದಿದ್ದ ದುರಂತ

■ ಕೇಶವಮೂರ್ತಿ ವಿ.ಬಿ. ಹುಬ್ಬಳ್ಳಿ

ನೈಋತ್ಯ ರೈಲ್ವೆ ಮುಖ್ಯ ಕಚೇರಿ ಹೊಂದಿರುವ ಹುಬ್ಬಳ್ಳಿ ರೈಲು ನಿಲ್ದಾಣದಲ್ಲಿದ್ದ ರೈಲ್ವೆ ಪೊಲೀಸ್ ಠಾಣೆ ಕಟ್ಟಡ ಕುಸಿದು 7 ಜನ ಸಾವನ್ನಪ್ಪಿ, 15 ಜನ ಗಂಭೀರವಾಗಿ ಗಾಯಗೊಂಡಿದ್ದರು. ಈ ಘಟನೆ ನಡೆದು ಮೂರು ವರ್ಷವಾದರೂ ಈವರೆಗೆ ಚಾರ್ಜ್‌ಶೀಟ್ ಸಲ್ಲಿಕೆಯಾಗಿಲ್ಲ. 2016ರ ಫೆಬ್ರವರಿ 8ರಂದು ರೈಲ್ವೆ ಕಟ್ಟಡ ಕುಸಿದಿತ್ತು. ಪೊಲೀಸ್ ಠಾಣೆ ಹಾಗೂ ಪಾರ್ಸಲ್ ಕಚೇರಿ ಕಾರ್ಯ ನಿರ್ವಹಿಸುತ್ತಿದ್ದವು. ಘಟನೆಯಲ್ಲಿ ಮೂವರು ಪೊಲೀಸ್ ಸಿಬ್ಬಂದಿ ಸೇರಿದಂತೆ 7 ಜನ ದಾರುಣವಾಗಿ ಸಾವನ್ನಪ್ಪಿದರು. 15ಕ್ಕೂ ಹೆಚ್ಚು ಜನರು ಗಂಭೀರವಾಗಿ ಗಾಯಗೊಂಡಿದ್ದರು. ಘಟನೆಯಿಂದ ಇಡೀ ಉತ್ತರ ಕರ್ನಾಟಕವೇ ಬೆಚ್ಚಿ ಬಿದ್ದಿತ್ತು.

ಘಟನೆ ಸಂಬಂಧ ಸೀನಿಯರ್ ಸೆಕ್ಷನ್ ಇಂಜಿನಿಯರ್ ಸೇರಿ ಹಲವು ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಾಗಿತ್ತು. ರೈಲ್ವೆ ಕಟ್ಟಡ ದುರಂತದ ಕುರಿತು ಅಂದೇ ಪ್ರಕರಣ ದಾಖಲಾಗಿತ್ತು. ಈ ಕುರಿತು ರೈಲ್ವೆ ಇಲಾಖೆಗೆ ವರದಿ ನೀಡಲಾಗಿದ್ದು, ಇಲಾಖೆಯ ನಿರ್ದೇಶನ ಬಂದ ಬಳಿಕ ಚಾರ್ಜ್‌ಶೀಟ್ ದಾಖಲಿಸಲಾಗುವುದು ಎಂದು ರೈಲ್ವೆ ಪೊಲೀಸ್ ಠಾಣೆ ಡಿವೈಎಸ್‌ಪಿ ಬಿ.ಬಿ. ಪಾಟೀಲ 'ವಿಜಯವಾಣಿ'ಗೆ ತಿಳಿಸಿದ್ದಾರೆ. ಧಾರವಾಡದಲ್ಲಿ ಮಂಗಳವಾರ ನಿರ್ಮಾಣ ಹಂತದ ಕಟ್ಟದ ಕುಸಿದು ಬಿದ್ದ ಘಟನೆ ಹಿನ್ನೆಲೆಯಲ್ಲಿ ರೈಲ್ವೆ ನಿಲ್ದಾಣದ ಕಟ್ಟಡ ಕುಸಿತ ಘಟನೆ ಕುರಿತು ಕೆದಕಿದಾಗ ಈ ವಿಷಯ ಹೊರಗೆ ಬಂತು.

(ಸಂಗ್ರಹ ಚಿತ್ರ)



ಮೂರು ವರ್ಷದ ಹಿಂದೆ (2016ರಲ್ಲಿ) ಹುಬ್ಬಳ್ಳಿ ರೈಲು ನಿಲ್ದಾಣದ ಕಟ್ಟಡ ಕುಸಿದಿದ್ದ ದೃಶ್ಯ.

**300 ಕಟ್ಟಡಗಳಿಗೆ ನೋಟಿಸ್ ನೀಡಿತ್ತು**

ರೈಲ್ವೆ ಕಟ್ಟಡ ಕುಸಿದ ಘಟನೆಯಿಂದ ಎಚ್ಚೆತ್ತ ರೈಲ್ವೆ ಇಲಾಖೆ ಅಧಿಕಾರಿಗಳು ಇಲಾಖೆಯ 300 ಹಳೆಯ ಕಟ್ಟಡಗಳಿಗೆ ನೋಟಿಸ್ ನೀಡಿದ್ದರು. ಕಟ್ಟಡದ ವಸ್ತುಸ್ಥಿತಿ ಕುರಿತು ಅಧ್ಯಯನ ನಡೆಸಲು ಸೂಚಿಸಿದ್ದರು. ಆದರೆ, ಆ ಕುರಿತು ವರದಿ ಸಿದ್ಧವಾಯಿತೋ? ಇಲ್ಲವೋ ? ಎಂಬುದನ್ನು ಈವರೆಗೂ ಅಧಿಕಾರಿಗಳು ಮಾಧ್ಯಮದವರಿಗೆ ತಿಳಿಸಿಲ್ಲ.

Vijaya vani news paper written a negative article regarding Even after three years no charge sheet filed in Hubballi parcel office collapse case in which 7 persons died this news was focused because of Yesterday a 4 floor commercial complex near New bus stand road Dharwad was collapsed and it is written as 300 old structures were given notice by Railway and further action is not taken.

Scanned by CamScanner

विजय कर्नाटक/हुबली

VIJAYA KARNATAKA/HUBLI

20 MAR 2019

(2)

## 3 ವರ್ಷಗಳ ಹಿಂದೆಯೂ ನಡೆದಿತ್ತು ಘೋರ ಘಟನೆ



**ಹುಬ್ಬಳ್ಳಿ:** 2016 ಫೆಬ್ರುವರಿ 8 ರಂದು ಹುಬ್ಬಳ್ಳಿ ರೈಲ್ವೆ ನಿಲ್ದಾಣದ ಹಳೆಯ ಕಟ್ಟಡ ತೆರವು ಕಾರ್ಯಾಚರಣೆ ವೇಳೆ ರೇಲ್ವೆ ಪಾರ್ಸಲ್ ಬುಕ್ಕಿಂಗ್ ಕೌಂಟರ್ ಕಟ್ಟಡ ಕುಸಿದು 7 ಮಂದಿ ಮೃತಪಟ್ಟು, 16ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. 60 ವರ್ಷ ಹಳೆಯ ಎರಡು ಅಂತಸ್ತಿನ ಕಟ್ಟಡದ ಮೇಲಿನ ಅಂತಸ್ತಿನಲ್ಲಿ ರೈಲ್ವೆ ಪೊಲೀಸ್ ಠಾಣೆ ಹಾಗೂ ಕೆಳ ಅಂತಸ್ತಿನಲ್ಲಿ ಪಾರ್ಸಲ್ ಬುಕ್ಕಿಂಗ್ ಕೌಂಟರ್ ಕಾರ್ಯ ನಿರ್ವಹಿಸುತ್ತಿದ್ದವು. ಪೊಲೀಸ್ ಠಾಣೆ ಸ್ಥಳಾಂತರದಿಂದ ಖಾಲಿಯಾಗಿದ್ದ ಮೇಲಿನ ಅಂತಸ್ತನ್ನು ಜೆಸಿಬಿ ಮೂಲಕ ತೆರವುಗೊಳಿಸುವ ಕಾರ್ಯಾಚರಣೆ ಆರಂಭಿಸಿದಾಗ ಮೇಲಿನ ಅಂತಸ್ತಿನ ಜತೆಗೆ ಕೆಳಗಿನ ಅಂತಸ್ತೂ ಕುಸಿದದ್ದೇ ದುರಂತಕ್ಕೆ ಕಾರಣವಾಗಿತ್ತು.

The Vijaya Karnataka news paper written regarding Three years back in Hubballi parcel office was collapsed in this incident in which 7 persons died this news was focused because of Yesterday a 4 floor commercial complex near new bus stand road Dharwad was collapsed.

Scanned by CamScanner

प्रजा वाणी/हुबली
PRAJA VANI/HUBLI.
20 MAR 2019

3

# ರೈಲ್ವೆ ಕಟ್ಟಡ ಕುಸಿದಾಗ..

ಹುಬ್ಬಳ್ಳಿ: ನಗರದ ರೈಲ್ವೆ ನಿಲ್ದಾಣದಲ್ಲಿನ ಪಾರ್ಸೆಲ್ ಬುಕ್ಕಿಂಗ್, ಪೊಲೀಸ್ ಠಾಣೆಯ ಹಳೆಯ ಕಟ್ಟಡ ಕುಸಿದು ಏಳು ಮಂದಿ ಮೃತಪಟ್ಟಿದ್ದರು.

2016 ಫೆ.9ರಂದು ದುರ್ಘಟನೆನಡೆದಿತ್ತು. 11 ಮಂದಿಯನ್ನು ರಕ್ಷಿಸಲಾಗಿತ್ತು. ರಾಜ್ಯ ಹಾಗೂ ಕೇಂದ್ರ ಸರ್ಕಾರ ತಲಾ ₹ 2 ಲಕ್ಷ ಪರಿಹಾರ ಘೋಷಿಸಿದ್ದವು.

ನೆಲಮಹಡಿಯಲ್ಲಿ ಪಾರ್ಸೆಲ್ ಬುಕ್ಕಿಂಗ್ ಕಚೇರಿ, ಮೊದಲ ಮಹಡಿಯಲ್ಲಿ ಪೊಲೀಸ್ ಠಾಣೆ ಕಾರ್ಯ ನಿರ್ವಹಿಸುತ್ತಿದ್ದವು. ಘಟನೆ ನಡೆಯುವ ಒಂದು ವಾರದ ಮುಂಚೆ ಠಾಣೆಯನ್ನು ವರ್ಗಾಯಿಸಲಾಗಿತ್ತು. ಪಾರ್ಸೆಲ್ ಕಚೇರಿ ಕಾರ್ಯ ನಿರ್ವಹಿಸುತ್ತಿತ್ತು. ಮೊದಲ ಮಹಡಿ ತೆರವುಗೊಳಿಸುವಾಗ 'ಕುಸಿದು ಅವಘಡ ಸಂಭವಿಸಿತ್ತು.

The Praja vani news paper written that Three years back in Hubballi parcel office was collapsed in this incident in which 7 persons died central and state government announced 2 Lakhs compensation for the family.this news was focused because of Yesterday a 4 floor commercial complex near new bus stand road Dharwad was collapsed.

Scanned by CamScanner